ಮರದಲ್ಲಿ ಮಾಡಿ ತಂದಿದ್ದ. ಒಂದಷ್ಟು ಬಣ್ಣದ ಗಾಜಿನ ಬಳೆಗಳ ಮೇಲೆ ನಾಲ್ಕು ಹನಿ ಕಣ್ಣೀರೂ ಬಿದ್ದಂತೆ ನನಗನಿಸಿತು. ಮದುವೆಗೆ ನಿಲ್ಲದೆ, ಮಾತೇ ಆಡದೆ ಹೊರಟುಹೋಗಿದ್ದ. ಆಸೆಗಳು ಅಳಿದ ಮೇಲೆ ಉಳಿದ ಆ ಶರೀರದಲ್ಲಿ ಆತ್ಮವೇ ಇಲ್ಲವೇನೊ ಅಂತನಿಸುತ್ತಿತ್ತು.

ಆಮೇಲೆ ನನ್ನ ಮೊದಲ ಹೆರಿಗೆ ಹೊತ್ತಿಗೆ ವೇಲಾಯುಧನನ್ನು ಮತ್ತೊಮ್ಮೆ ನೆನೆಯುವಂತಾಯಿತು. ನಮಗ್ಯಾಕೋ ಮೈಮೇಲೆ ಒದ್ದೆಯಾದ ಬಟ್ಟೆಯಂತೆ ಕಳಚಬೇಕೆಂದರೂ ಕಳಚಲಾಗದ ಬಂಧ ಅವನದಾಗಿತ್ತು. ಮಗುವಿಗಾಗಿ ತೊಟ್ಟಿಲು ಅವಶ್ಯವಿತ್ತು. ಒಪ್ಪಿ ಬಂದಿದ್ದ ವೇಲು ಹಗಲು ಸಾಮಾನ್ಯವಾಗಿ ಕಂಡುಬರುತ್ತಿದ್ದ. ಕತ್ತಲಾದೊಡನೆ ಕಂಠಪೂರ್ತಿ ಕುಡಿದು ಬಂದು ವಿಪರೀತ ಅಳುತ್ತಿದ್ದ. ಈಗ ಬಂದಾತ ಹಿಂದಿನ ವೇಲುವಿನ ಪ್ರೇತರೂಪದಂತಿದ್ದ. ಎರಡು ವರ್ಷದಲ್ಲಿ 20 ವರ್ಷ ಸೇರಿದಂತೆ ಮುಪ್ಪು ಆವರಿಸಿತ್ತು. ಕೆಲಸದೊಂದಿಗೆ ಯಾವ ಭಾವ ಗಾಯನವೂ ಇಲ್ಲದೆ ಬಹಳ ಬೇಗ ಸುಸ್ತಾಗುತ್ತಿದ್ದ. ನಮಗೂ ಏನೊ ಒಂದು ಅಯಾಚಿತವನ್ನು ಎಳೆದುಕೊಂಡ ತಪ್ಪಿನ ಅರಿವು ಆಗಾಗ ಚುಚ್ಚುತ್ತಿತ್ತು. ಆದರೆ, ಅಂತಹ ಹೊತ್ತಿಗೂ ಅವನ ಕೈಗೆಲಸದಲ್ಲಿ ಮೂಡಿಬಂದ ಆ ತೊಟ್ಟಿಲು ನಂದಗೋಕುಲದಿಂದಲೇ ತಂದಷ್ಟು ಅಂದವಾಗಿತ್ತು. ಮೈತುಂಬಾ ಕಂಗೊಳಿಸುವ ಚಿತ್ರ–ಚಿತ್ತಾರಗಳು, ಜೀವಂತಿಕೆಯ ಭಾವ ಬಿಂಬಿಸುವ ಹಕ್ಕಿ, ಹೂ, ಬಳ್ಳಿಗಳು. ತೊಟ್ಟಿಲ ಶಾಸ್ತ್ರಕ್ಕೆ ಬಂದ ಮಂದಿ ಮಗುವನ್ನು ಮರೆತು ತೊಟ್ಟಿಲಿಗೆ ಬೆರಗಾಗಿದ್ದರು. ಎಲ್ಲ ಸಂತೃಪ್ತಿಯನ್ನು ಮೀರಿ ಅವನೊಂದು ಸಮಸ್ಯೆಯಾಗಿದ್ದ. ಕಾಲಿಗೆ ಆದ ಗಾಯ ನಡೆಯನ್ನು ನಿಯಂತ್ರಿಸುತ್ತದೆ. ಮನಸ್ಸಿಗಾದರೆ? ಬದುಕನ್ನೇ ಹಿಡಿದು ಕುಲುಕುತ್ತದೆ. ರಾತ್ರಿಯ ವಿಲಾಪಗಳ ನಡುವೆ ವೇಲು ಆಗಾಗ ಆರ್ತನಾಗಿ 'ಮೋಳೇ'

